ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **324/2020**

| | | |
|---|---|---|
| ಸಾಕ್ಷಿಯ ಹೆಸರುಃ | ತಿಮ್ಮಪ್ಪ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಭೀಮಪ್ಪ | ಚಾಸಾಃ 1 |
| ವಯಸ್ಸು ಃ | 64 ವರ್ಷ | ದಿಃ 18-12-2025 |
| ಉದ್ಯೋಗಃ | ನಿವೃತ್ತ ಪೊಲಿಸ ಅಧಿಕಾರಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಗುರುಮಿಠಕಲ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು 2018 ರಿಂದ 2021 ರವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಎ.ಎಸ್.ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 26-03-2020 ರಂದು ಸಂಜೆಃ 5.00 ಗಂಟೆ ಸುಮಾರಿಗೆ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ, ನಾನು, ಚಾಸಾಃ 2 ರಿಂದ 7 ರವರು ಸರಕಾರಿ ವಾಹನದ ಮೂಲಕ ಯಲಸತ್ತಿ ಗ್ರಾಮದ ಬಸ್ ನಿಲ್ದಾಣಕ್ಕೆ ಹೋಗಿರುತ್ತೇವೆ. ಆರೋಪಿತರು ನಮ್ಮನ್ನು ನೋಡಿ ಸ್ಥಳದಲ್ಲಿ ಓಡಿ ಹೋಗಿರುತ್ತಾರೆ. ಪಂಚರ ಸಮಕ್ಷಮದಲ್ಲಿ ಜಪ್ತಿ ಮಾಡಿರುತ್ತೇವೆ. ಸದರಿ ಘಟನಾ ಸ್ಥಳದಲ್ಲಿ 650 ಎಮ್, ಎಲ್ ನ 4 ಕಿಂಗ್ ಫೀಶರ್ ಬಾಟಲಿ, 330 ಎಮ್, ಎಲ್ ನ 6 ಬಾಟಲಿಗಳು ಒಟ್ಟು 10 ಬಾಟಲಿಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ. ಅಂದಾಜು ಕಿಮ್ಮತ್ತು 1,060/- ಇರುತ್ತದೆ. 2 ಬಾಟಲಿಗಳನ್ನು ತಲಾ ಒಂದರಲ್ಲಿ ಸ್ಯಾಂಪಲಗಾಗಿ ತಜ್ಞರ ವರದಿಗಾಗಿ ಪಡೆದುಕೊಂಡಿರುತ್ತೇನೆ. ಗುನ್ಹೆ ಸ್ಥಳದ ಪಂಚನಾಮೆಯನ್ನು ಸಂಜೆಃ 6.00 ರಿಂದ 7.00 ಗಂಟೆಯವರೆಗೆ ಪಂಚರ ಸಮಕ್ಷಮದಲ್ಲಿ ಮಾಡಿರುತ್ತೇನೆ. ಸದರಿ ಓಡಿ ಹೋದ ಆರೋಪಿತನ ಹೆಸರು ಭೀಮು @ ಭೀಮಾಶಂಕರ ಎಂದು ತಿಳಿದುಬಂದಿರುತ್ತದೆ. ಆರೋಪಿತನನ್ನು ನೋಡಿದರೆ ನಾನು ಗುರುತಿಸುತ್ತೇನೆ. ಪಂಚನಾಮೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಜ್ಞಾಪಕ ಪತ್ರವನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲಗಳನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್, ಎಮ್. ಜಿ ವಕೀಲರಿಂದ.</u>

1. ನನಗೆ ಭಾತ್ಮಿ 5.00 ಗಂಟೆಗೆ ಬಂದಿರುತ್ತದೆ. ಪಂಚರು ಪೊಲಿಸ ಠಾಣೆಯಲ್ಲಿ ಇದ್ದರು. ಸಂಜೆಃ 5.15 ನಿಮಿಷಕ್ಕೆ ಪೊಲಿಸ ಠಾಣೆಯಿಂದ ಹೊರಟು 5.30 ಗಂಟೆಗೆ ತಲುಪಿರುತ್ತೇವೆ. ಸೈದಾಪೂರದಿಂದ ಯಲಸತ್ತಿ 25 ಕಿ.ಮೀ ಅಂತರವಿದೆ ಎಂದರೆ ಸರಿ. ಹೋಗಲು ಅರ್ಧ ಗಂಟೆ ಕಾಲಾವಕಾಶ ಬೇಕು. ಆರೊಪಿತನು ಬಸ ಸ್ಟ್ಯಾಂಡ ಹತ್ತಿರ ರಟ್ಟಿನ ಬಾಕ್ಸನಲ್ಲಿ ಸೇಂದಿ ಮಾರಾಟ ಮಾಡುತ್ತಿದ್ದನು. ಸದರಿ ನಾವು 100 ಮೀಟರ ದೂರದಿಂದ ನೋಡಿರುತ್ತೇವೆ. 100 ಮೀಟರ ದೂರದಿಂದಬಾಟಲಿಗಳು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಇಬ್ಬರು ಜನರು ಇದ್ದರು. ಭೀಮಶಂಕರ ಹೆಸರಿನವರು ಬಹಳ ಜನ ಇರುತ್ತಾರೆ ಎಂದರೆ ಸಾಕ್ಷಿಯು ಆರೋಪಿತನು ಇರುತ್ತಾನೆ ಎಂದು ನುಡಿಯುತ್ತಾರೆ. ಹಿಡಿಯಲು ಪ್ರಯತ್ನ ಮಾಡಿದ್ದರೂ ಕೂಡ ಆರೋಪಿತನು ಓಡಿ ಹೋಗಿರುತ್ತಾನೆ. ಇಬ್ಬರೂ ಓಡಿ ಹೋಗಿರುತ್ತಾರೆ. ಗ್ರಾಮದಲ್ಲಿ ಬೇರೆಯವರ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಪಂಚನಾಮೆಯನ್ನು ಚಾಸಾಃ 5 ರವರು ಟೈಪ ಮಾಡಿಸಿರುತ್ತಾರೆ. ಪಂಚರ ಸಹಿಯನ್ನು ಸ್ಥಳದಲ್ಲಿ ಪಡೆದುಕೊಂಡಿರುತ್ತೇವೆ. ಪ್ರಿಂಟನ್ನು ಸ್ಥಳದಲ್ಲಿ ತೆಗೆದುಕೊಂಡಿರುತ್ತೇವೆ. ಚಾಸಾಃ 5 ರವರ ಸಹಿಯನ್ನು ಪಂಚನಾಮೆಯಲ್ಲಿ ಪಡೆದುಕೊಂಡಿರುವುದಿಲ್ಲ.

2. ನಿಪಿ-1 ರಲ್ಲಿ ಚಕಬಂದಿಯನ್ನು ಬರೆಸಿರುತ್ತೇವೆ. ಪೂರ್ವಕ್ಕೆ ತೋರಣ ತಿಪ್ಪ ರಸ್ತೆ, ಪಶ್ಚಿಮಕ್ಕೆ ಸೈದಾಪೂರ ರಸ್ತೆ, ದಕ್ಷಿಣಕ್ಕೆ ಗೊತ್ತಿಲ್ಲ. ಉತ್ತರಕ್ಕೆ ಗೊತ್ತಿಲ್ಲ. ಮು. ಮಾ. ಗಳಲ್ಲಿ ಪಂಚರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯಲ್ಲಿ ಪಂಚರ ಮತ್ತು ಮು. ಮಾ. ಗಳಲ್ಲಿರುವ ಪಂಚರ ಸಹಿ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಗುನ್ನೆ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಯಾವುದೇ ಜಪ್ತಿ ಪಂಚನಾಮೆ ಮಾಡಿರುವುದಿಲ್ಲ, ಅಂಕೆ ಸಂಖ್ಯೆಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ